ಜೀವಮಾನದಲ್ಲಿ ಮಹಿಳೆಯೊಬ್ಬಳು ಚಂದ್ರನ ನೆಲದ ಮೇಲೆ ಹೆಜ್ಜೆ ಇಡುವುದನ್ನು ನೋಡಬೇಕು' ಎಂದಿದ್ದಾರೆ. 2024ಕ್ಕೆ ತಾನು ಆ ಸಾಧನೆ ಮಾಡಿ ತೋರಿಸುತ್ತೇನೆ ಎಂದು 'ನಾಸಾ' ಭರವಸೆ ನೀಡಿದೆ. ಕಾದು ನೋಡಬೇಕು.

ಭಾರತೀಯ ಮೂಲದ ಸುನೀತಾ ವಿಲಿಯಮ್ಸ್ 194 ದಿನ 18 ಗಂಟೆಗಳ ಕಾಲ ಬಾಹ್ಯಾಕಾಶ ನಿಲ್ದಾಣದಲ್ಲಿದ್ದರು. ಅವರ ವಿಶಿಷ್ಟ ಸಾಧನೆ ಏನು ಗೊತ್ತೆ? ಜಗತ್ತಿನ ಅತಿ ಪ್ರತಿಷ್ಠಿತ ಮ್ಯಾರಥಾನ್ ಎಂದೇ ಪ್ರಖ್ಯಾತಿ ಪಡೆದಿರುವ 'ಬಾಸ್ಟನ್ ಮ್ಯಾರಥಾನ್'ನಲ್ಲಿ ಅವರು ಬಾಹ್ಯಾಕಾಶದಲ್ಲಿದ್ದುಕೊಂಡೇ ಭಾಗವಹಿಸಿದ್ದರು. 2007ರಲ್ಲಿ ಅಮೆರಿಕದ ಬಾಸ್ಟನ್ ನಗರದಲ್ಲಿ ಆ ಓಟ ಆರಂಭವಾದಾಗಲೇ ಇವರೂ 'ಐಎಸ್‌ಎಸ್'ನಲ್ಲಿದ್ದ ಟ್ರೆಡ್‌ಮಿಲ್ ಮೇಲೆ ಹೆಜ್ಜೆ ಹಾಕಲು ಆರಂಭಿಸಿದರು. ನಿರಂತರ ನಾಲ್ಕು ಗಂಟೆಗಳ ಓಟ ಅವರದ್ದಾಗಿತ್ತು. ಇದುವರೆಗೂ ಆ ದಾಖಲೆಯನ್ನು ಯಾರೂ ಮುರಿದಿಲ್ಲ. ಅವರು ಓಟ ಮುಗಿಸುವಷ್ಟರಲ್ಲಿ ಭೂಮಿ ಎರಡು ಸುತ್ತು ಸುತ್ತಿ ಬಂದಿತ್ತು!

ರಷ್ಯಾ, ಅಮೆರಿಕಕ್ಕೆ ಹೋಲಿಸಿದರೆ ಚೀನಾದ ಸಾಹಸ ತುಸು ಹೆಚ್ಚಿನದು. ಈಚೆಗಷ್ಟೇ ಅದರ ಬಾಹ್ಯಾಕಾಶ ಸಾಧನೆ ಆರಂಭವಾಗಿದ್ದು ಇದುವರೆಗೆ 14 ಗಗನಯಾತ್ರಿಗಳನ್ನು ಮಾತ್ರ ಅದು ಅಂತರಿಕ್ಷಕ್ಕೆ ಕಳಿಸಿದೆ. ಅವರಲ್ಲಿ ಇಬ್ಬರು ಮಹಿಳೆಯರೂ ಇದ್ದಾರೆ. ಐದು ವರ್ಷದ ಹೆಣ್ಣುಮಗುವಿನ ತಾಯಿ ವಾಂಗ್‌ಯಾಪಿಂಗ್ ಅಕ್ಟೋಬರ್ 2021ರಲ್ಲಿ ಗಗನನೌಕೆಯನ್ನೇರಿ, ಚೀನಾದ್ದೇ ಸ್ವಂತದ ಬಿಡಿಭಾಗಗಳ ಜೋಡಣೆಯಲ್ಲಿ ತೊಡಗಿದ್ದರು. ನಮ್ಮ ದೇಶದ ಮಟ್ಟಿಗೆ ಅಂಥ ಅವಕಾಶ ಪಡೆಯಬಲ್ಲ ಮಹಿಳೆ ಇನ್ನೂ ಏಳೆಂಟು ವರ್ಷ ಅಥವಾ ಜಾಸ್ತಿಯೇ ಕಾಯಬೇಕೇನೊ?




ಚೀನಾದ ಬಾಹ್ಯಾಕಾಶಯಾನಿ ವಾಂಗ್‌ಯಾಪಿಂಗ್ ಐದು ವರ್ಷದ ಹೆಣ್ಣುಮಗುವಿನ ತಾಯಿ. ಅಕ್ಟೋಬರ್ 2021ರಲ್ಲಿ ಗಗನನೌಕೆಯನ್ನೇರಿ, ಅದರ ಬಿಡಿಭಾಗಗಳ ಜೋಡಣೆಯಲ್ಲಿ ತೊಡಗಿದ್ದರು.

## ವ್ಯವಸ್ಥಿತ ಪಿತೂರಿ

ಮೂವತ್ತು ವರ್ಷಗಳ ಹಿಂದೆ ಆರ್ಥಿಕ ಸದೃಢತೆಯ ಕೊರತೆಯಿಂದ ಮಹಿಳೆಯರು ವಿಜ್ಞಾನದ ಮುಖ್ಯ ವಾಹಿನಿಯಿಂದ ದೂರವುಳಿದಿದ್ದಾರೆ ಎಂಬ ಮಾತು ಚಾಲ್ತಿಯಲ್ಲಿತ್ತು. ಮಹಿಳೆಯರು ವಿಜ್ಞಾನ ಮತ್ತು ಗಣಿತವನ್ನು ಇಷ್ಟಪಡುವುದಿಲ್ಲ ಎಂಬ ಪುಕಾರನ್ನೂ ಹಬ್ಬಿಸಲಾಗಿತ್ತು. ಈಗ್ಗೆ 20 ವರ್ಷಗಳ ಹಿಂದೆ ಸಂಶೋಧನೆ ಕೈಗೊಂಡಿದ್ದ ಸ್ವೀಡನ್ನಿನ ವೈದ್ಯಕೀಯ ಸಂಶೋಧನಾ ಘಟಕ, ಪುರುಷರಿಗಿಂತ ಮಹಿಳೆಯರು ಎರಡರಷ್ಟು ಹೆಚ್ಚು ಸಂಶೋಧನಾ ಪ್ರವೃತ್ತಿ ಉಳ್ಳವರು ಎಂದು ವರದಿ ನೀಡಿತ್ತು. 'ಅಮೆರಿಕನ್ ಅಸೋಸಿಯೇಶನ್ ಆಫ್ ಯೂನಿವರ್ಸಿಟಿ ವುಮೆನ್' ಸಂಘಟನೆ, ಪರಿಸರ ಮತ್ತು ಸಾಮಾಜಿಕ ಕಟ್ಟುಪಾಡುಗಳಿಂದಾಗಿಯೂ ಹಲವು ಹೆಣ್ಣುಮಕ್ಕಳು ವಿಜ್ಞಾನ ಕ್ಷೇತ್ರದಿಂದ ದೂರವುಳಿದಿದ್ದಾರೆ ಎಂದಿತ್ತು. ಹಲವು ಕಾಲೇಜು ಮತ್ತು ವಿಶ್ವವಿದ್ಯಾಲಯಗಳು ಮಹಿಳೆಯರು ಎದುರಿಸುತ್ತಿರುವ ಸಾಮಾಜಿಕ ಅಡೆತಡೆಗಳನ್ನೇ ಸ್ವಯಂ ಲಾಭಕ್ಕೆ ಬಳಸಿಕೊಂಡು ಅವರ ಪ್ರವೇಶಕ್ಕೆ ತಡೆ ಹಾಕುತ್ತವೆ. 'ಕ್ಯಾಂಪಸ್ ರಿಕ್ರೂಟ್‌ಮೆಂಟ್ ಡ್ರೈವ್'ಗಳಲ್ಲೂ ಮಹಿಳೆಯರ ಆಯ್ಕೆ ಪುರುಷರಿಗೆ ಹೋಲಿಸಿದರೆ ನಾಲ್ಕು ಪಟ್ಟು ಕಡಿಮೆ ಇರುವುದು ಬೆಳಕಿಗೆ ಬಂದಿದೆ.

ಅಂತರಿಕ್ಷ ಯಾನ ಮತ್ತು ವಾಸ್ತವ್ಯ ಎರಡಕ್ಕೂ ಮಹಿಳೆಯರು ಪುರುಷರಿಗಿಂತ ಬಹುಬೇಗ ಮತ್ತು ಉತ್ತಮವಾಗಿ ಹೊಂದಿಕೊಳ್ಳುತ್ತಾರೆ ಎಂಬುದು ಹಲವು ಸಂಶೋಧನೆಗಳಿಂದ ಬೆಳಕಿಗೆ ಬಂದಿದೆಯಾದರೂ, ಸ್ಪೇಸ್ ಏಜೆನ್ಸಿ ಮತ್ತು ಸರ್ಕಾರಗಳು ಮಹಿಳೆಯರನ್ನು ಆಯ್ಕೆಮಾಡುವಲ್ಲಿ ಹಿಂದೇಟು ಹಾಕುತ್ತಿರುವುದು ಕಳವಳಕಾರಿಯಾಗಿದೆ. ಈಗ ಮಹಿಳೆಯರು ಹಲವು ಬಗೆಯ ಉತ್ಪಾದನಾ ರಂಗಗಳಲ್ಲಿ ಕ್ರಿಯಾಶೀಲರಾಗಿದ್ದು, ಆರ್ಥಿಕತೆ ಬೆಳೆದಿದೆಯಾದರೂ ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರ ಸಂಖ್ಯೆಯಲ್ಲಿ ಏರಿಕೆಯಾಗಿಲ್ಲ.

ಎರಡು ವರ್ಷಗಳ ಹಿಂದೆ ಅಮೆರಿಕದ ಬೀದಿಗಳಲ್ಲಿ 'ಮಹಿಳಾ ನಡಿಗೆ' ಆಯೋಜಿಸಿದ ಮಹಿಳಾ ಹೋರಾಟಗಾರರು ಮಹಿಳೆಗೆ ಸಂಬಂಧಿಸಿದಂತೆ ಆಗುತ್ತಿರುವ ಎಲ್ಲ ಬಗೆಯ ಅನ್ಯಾಯದ ವಿರುದ್ಧ ದನಿ ಎತ್ತಿ 'ವೈಟ್ ಹೌಸ್'ನ ಮುಂದೆ ಪ್ರತಿಭಟಿಸಿದ್ದರು. ನಿರ್ಭಯಾಳ ಮೇಲೆ ನಡೆದ ನೀಚ ಕೃತ್ಯ ಮತ್ತು ಮಲಾಲಾಳ ಮೇಲೆ ನಡೆದ ಕೊಲೆಯ ಯತ್ನ ಎರಡಕ್ಕೂ ಅಂಥ ವ್ಯತ್ಯಾಸವೇನೂ ಇಲ್ಲ. ಎರಡರಲ್ಲೂ ಎದ್ದು ಕಾಣುವುದು ಮಹಿಳಾ ಏಳಿಗೆಯ ವಿರುದ್ಧ ಪುರುಷರ ಅನಾರೋಗ್ಯ ಮನಸ್ಸುಗಳು ಸೃಷ್ಟಿಸಿರುವ ಚಿಂತನೆಗಳ ಪೈಶಾಚಿಕ ವಿಜೃಂಭಣೆಗಳೇ ಎಂದಿದ್ದರು. 'ಗ್ಲೋಬಲ್ ಫಂಡ್ ಫಾರ್ ವುಮೆನ್ಸ್ ಟೆಕ್ನಾಲಜಿ'ಯ ಪ್ರಕಾರ, ಇಂಟರ್‌ನೆಟ್‌ನಲ್ಲಿರುವ ಅವಮಾನಕಾರಿ ಹೇಳಿಕೆ, ಅಶ್ಲೀಲವೆನ್ನಿಸುವ ಸಂದೇಶ, ಚಿತ್ರ, ಕೀಳು ಭಾಷೆಯ ಪ್ರಯೋಗದ ಶೇ. 95ರಷ್ಟು ಭಾಗ ಮಹಿಳೆಯರ ಕುರಿತೇ ಆಗಿದ್ದು ತಂತ್ರಜ್ಞಾನದ ದುರ್ಬಳಕೆಯಾಗುತ್ತಿದೆ. ವಿಶ್ವದ ಇಂಟರ್‌ನೆಟ್